# ಸ್ತ್ರೀವಾದಿ ಚಿಂತನೆ ಮತ್ತು ಕಮಲಾ ಹಂಪನಾ

ಸಿ.ಎಂ. ತಳವಾರ
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಶ್ಚಾಪುರ, ಬೆಳಗಾವಿ.

DOI: https://doi.org/10.5281/zenodo.18699027

## ABSTRACT:

ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯು ಅಭಿವೃದ್ಧಿ ಪಥದತ್ತ ಹೆಜ್ಜೆ ಇಟ್ಟರೂ ಕೂಡಾ ಮಹಿಳೆಯ ಬಗೆಗಿನ ಚಿಂತನೆ ಅಥವಾ ಮಹಿಳಾ ಸಾಮಾಜಿಕ ಚಿಂತನೆಯು ಹಾಗೂ ಮಹಿಳಾ ಸ್ವಾತಂತ್ರ್ಯ, ಸ್ವಾವಲಂಬನೆಯು ತೃಪ್ತಿದಾಯಕವಾಗಿಲ್ಲ. ಸಮಕಾಲೀನ ಸಂದರ್ಭವು ಸೃಷ್ಟಿಸಿರುವ ಹಲವಾರು ಸಮಸ್ಯೆಗಳ ನಡುವೆ ಸ್ತ್ರೀಸಬಲೀಕರಣ, ಸ್ತ್ರೀಸ್ವಾತಂತ್ರ್ಯದ ಬಗೆಗಿನ ಚಿಂತನೆಗೆ ಮಹತ್ವ ಕಡಿಮೆಯಾಗಿದ್ದು ಇದು ಜರೂರಾಗಿ ಪರಿಹರಿಸಲೇಬೇಕಾಗಿರುವ ಅನಿವಾರ್ಯ ಪ್ರಕ್ರಿಯೆಯಾಗಿ ಉಳಿದಿಲ್ಲ. ಸ್ತ್ರೀ ಸಂವೇದನೆ ಕುರಿತಾದ ಸುಮಾರು 650 ಪುಟಗಳ 'ಭರಣ' ಎಂಬ ಸಂಪುಟವು ಪ್ರೊ. ಕಮಲಾ ಹಂಪನಾ ಅವರ ಸ್ತ್ರೀವಾದಿ ವಿಚಾರಗಳಿಗೆ ಹಿಡಿದ ಕೈಗನ್ನಡಿ. 'ಭರಣ' ಪ್ರಬಂಧಗಳ ಗುಚ್ಛ. ಧರಿಸುವುದು, ಪೋಷಿಸುವುದು, ತುಂಬುವುದು ಎಂಬ ಅರ್ಥಗಳು ಭರಣ ಪದಕ್ಕಿದೆ. ಈ ಮೂರು ಅರ್ಥಗಳೂ ಪೂರಕವಾಗಿ ಧರಿಸುವ, ತುಂಬುವ ಮತ್ತು ಪೋಷಿಸುವ ಗುಣಗಳ ಪ್ರತೀಕವೇ ಮಹಿಳೆ ಎಂದು ತಿಳಿಸುತ್ತಾರೆ. ಧರಿಸುವುದರಿಂದಲೇ ಆಕೆ ಧಾರಣಿ, ಶಾಂತಿ, ಸಹನೆ, ಧಾರಣೆಯ ಪ್ರತಿರೂಪವೇ ಸ್ತ್ರೀ. ಹೀಗೆ ಮಹಿಳೆ ಭರಣವೂ ಹೌದು ಆಭರಣವೂ ಹೌದು ಎಂದು ವಿವರಿಸುತ್ತಾರೆ. ಹಂಪನಾ ಅವರ ಚಿಂತನೆಯಲ್ಲಿ 'ಸಂಸಾರ' ಬಿಂದು ಪ್ರಮುಖ ಘಟಕ. ಅದು ಸರಿಯಾದ ಅಸ್ತಿಭಾರದ ಮೇಲೆ ನಿಂತಾಗ ಮಾತ್ರ ಸಮಾಜ, ನಾಡು, ದೇಶ, ಜಗತ್ತು ಸರಿಯಾಗಿ ನಿಲ್ಲಬಲ್ಲದು. ಇಂದು ಜಗತ್ತು ನಿಂತಿದೆ ಮುನ್ನಡೆಯುತ್ತಿದೆ ಎಂದರೆ ಅದರ ಶ್ರೇಯಸ್ಸು ಅದನ್ನು ಹೊತ್ತು ನಿಂತಿರುವ ಹೆಣ್ಣಿಗೆ ಸಲ್ಲುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. 'ಆ ಮುಖ' ಎಂಬ ಅವರ 19 ಜನ ಸಾಹಿತಿಗಳ ಪತ್ನಿಯರ ಸಂದರ್ಶನ, ವ್ಯಕ್ತಿ ಚಿತ್ರಣಗಳ ಕೃತಿಯಲ್ಲೂ ಕಮಲಾ ಹಂಪನಾ ಅವರು ಕೇಳುವ ಹಲವು ಪ್ರಶ್ನೆಗಳು ಈ ನಂಬಿಕೆಗೆ ಪೂರಕವಾಗಿಯೇ ಇದೆ. ಮಹಿಳೆಯರ ಬಗ್ಗೆ ವೈಚಾರಿಕ ಬರಹಗಳು, ರಾಷ್ಟ್ರಕೂಟ, ಗಂಗರ ಕಾಲದಿಂದ ಮಹಿಳೆಯರ ಬಗೆಗೆ ಸಂಶೋಧನಾ ಲೇಖನಗಳು, ಲೇಖಕಿಯರ ವ್ಯಕ್ತಿ ಚಿತ್ರಗಳು, ಲೇಖಕಿಯರ ಕೃತಿಗಳಿಗೆ ಬರೆದ ಮುನ್ನುಡಿಗಳು–ಹೀಗೆ ಕಮಲಾ ಹಂಪನಾ ಅವರ ಮಹಿಳಾ ಸಾಹಿತ್ಯ ವಿಸ್ತಾರವಾಗಿದೆ. ಸಂಘರ್ಷಕ್ಕಿಂತ ಸಾಮರಸ್ಯದ ಬಗೆಗೆ ಅವರ ಒಲವಿದೆ. 'ಅಮೃತಮತಿ: ಸ್ತ್ರೀವಾದಿ ನೆಲೆಯಲ್ಲಿ' ಎಂಬ ಬರಹ ಕಮಲಾ ಹಂಪನಾ ಅವರ ಮನೋಭೂಮಿಕೆಯನ್ನು ಅರಿಯಲು ಸೂಕ್ತ ಬರಹವಾಗಿದೆ. ಈ ಬರಹದಲ್ಲಿ ಅವರು ಇತರ ಹಲವರ ಪ್ರಮುಖ ಲೇಖನಗಳನ್ನೂ ಪರಿಗಣಿಸಿದ್ದಾರೆ. ನೀತಿ–ಅನೀತಿ, ಅಸ್ಮಿತೆ, ಸಂಘರ್ಷ ಹೀಗೆ ಸಾಗಿ ಬಂದ ಹಲವು ವಿಚಾರಗಳನ್ನು ಚರ್ಚಿಸುತ್ತಾ ಹಂಪನಾ ಅವರು ಅಮೃತಮತಿಯ ಒಳತುಳಿತನ್ನು ಕಾವ್ಯ ನ್ಯಾಯದಿಂದ ಅರಿಯಬೇಕು ಎನ್ನುತ್ತಾರೆ.

## KEYWORDS:

ಅಸ್ಮಿತೆ, ಸ್ವಂತಿಕೆ, ಅಹಮಿಕೆ, ಶೂದ್ರ, ಶೂಲ, ತ್ರಿಶೂಲ.

**ಪ್ರಸ್ತಾವನೆ:** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯ ಅಧ್ಯಯನ ವಿಶಿಷ್ಟ ಸ್ಥಾನಮಾನ ಪಡೆದಿದೆ. ಬದಲಾದ ಕಾಲಘಟ್ಟದಲ್ಲಿ ಮಹಿಳೆಯು ಅಭಿವೃದ್ಧಿ ಪಥದತ್ತ ಹೆಜ್ಜೆ ಇಟ್ಟರೂ ಕೂಡಾ ಮಹಿಳೆಯ ಬಗೆಗಿನ ಚಿಂತನೆ ಅಥವಾ ಮಹಿಳಾ ಸಾಮಾಜಿಕ ಚಿಂತನೆಯು ಹಾಗೂ ಮಹಿಳಾ ಸ್ವಾತಂತ್ರ್ಯ, ಸ್ವಾವಲಂಬನೆಯು ತೃಪ್ತಿದಾಯಕವಾಗಿಲ್ಲ. ಸಮಕಾಲೀನ ಸಂದರ್ಭವು ಸೃಷ್ಟಿಸಿರುವ ಹಲವಾರು ಸಮಸ್ಯೆಗಳ ನಡುವೆ ಸ್ತ್ರೀ ಸಬಲೀಕರಣ, ಸ್ತ್ರೀ ಸ್ವಾತಂತ್ರ್ಯದ ಬಗೆಗಿನ ಚಿಂತನೆಗೆ ಮಹತ್ವ ಕಡಿಮೆಯಾಗಿದ್ದು ಇದು ಜರೂರಾಗಿ ಪರಿಹರಿಸಲೇಬೇಕಾಗಿರುವ ಅನಿವಾರ್ಯ ಪ್ರಕ್ರಿಯೆಯಾಗಿ ಉಳಿದಿಲ್ಲ. ಹಾಗಾಗಿಯೇ ಕಾಲಕ್ಕೆ ಹೊಂದಿಕೊಂಡು ಮಹಿಳಾಪರ ಚಿಂತನೆಗಳ ಸ್ವರೂಪ, ಶೋಷಣೆಯ ಸ್ವರೂಪಗಳಲ್ಲಿ ಭಿನ್ನತೆ ಉಂಟಾದರೂ ಮಹಿಳಾ ಕೇಂದ್ರಿತ ಸಮಸ್ಯೆಗಳು ನಿವಾರಣೆಯಾಗದ ಸಮಸ್ಯೆಗಳಾಗಿಯೇ ಉಳಿದುಕೊಂಡಿವೆ. ಮಹಿಳಾ ಶೋಷಣೆಗೆ ಮುಖ್ಯ ಕಾರಣವಾದದ್ದರಲ್ಲಿ ಪುರುಷ ಪ್ರಧಾನ ವ್ಯವಸ್ಥೆಯೂ ಒಂದು ಎನ್ನಲಾಗುತ್ತದೆ. ಪ್ರಾದೇಶಿಕವಾಗಿ ಕೆಲವೇ ಕೆಲವು ಸಮುದಾಯಗಳಲ್ಲಿ ಮಹಿಳಾ ಪ್ರಾಧಾನ್ಯತೆ ಇರುವುದು ಕಂಡುಬರುತ್ತದೆ. ಉಳಿದಂತೆ ಬದಲಾದ ಬದುಕಿನಲ್ಲಿ ಧನಾತ್ಮಕ ಬದಲಾವಣೆಗಳು ಮಹಿಳೆಯಲ್ಲಿ ಕಂಡರೂ ಆಂತರ್ಯದಲ್ಲಿ ಅರಗಿಸಿಕೊಳ್ಳಲಾರದ, ಹೇಳಿಕೊಳ್ಳಲಾಗದ ಒತ್ತಡಗಳಿಗೆ ಮಹಿಳೆಯು ಒಳಗಾಗಿದ್ದಾಳೆ. ಈ ಮಹಿಳೆ ಚಿಂತನೆ ಕುರಿತಾದ ಎಲ್ಲ ರೀತಿಯಲ್ಲೂ ಸಮಾನತೆಯನ್ನು ತರಲು ಹೋರಾಡಿದ, ಬರವಣಿಗೆಯ ಮುಖೇನ ಹೊಸ ಆಂದೋಲನವನ್ನೆ ಹುಟ್ಟು ಹಾಕಿದ ಕನ್ನಡದ ಪ್ರಮುಖ ಬರಹಗಾರ್ತಿ, ಚಿಂತಕಿ ಪ್ರೊ. ಕಮಲಾ ಹಂಪನಾ ಅವರ ಸಾಹಿತ್ಯವನ್ನು ಅವಲೋಕಿಸುವುದೆಂದರೆ ಒಂದು ರೀತಿಯಲ್ಲಿ ಕಬ್ಬಿಣದ ಕಡಲೆಯೇ ಸರಿ.

**ಸ್ತ್ರೀವಾದಿ ಬೆಳವಣಿಗೆಯ ವಿಶ್ಲೇಷಣೆ:**

'ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ' ಅಂದರೆ ಎಲ್ಲಿ ಹೆಣ್ಣಿಗೆ ಗೌರವ ದೃಷ್ಟಿಯಿಂದ ಪೂಜಿಸಲಾಗುವುದೋ ಅಲ್ಲಿ ದೇವತೆಗಳು ವಿಜೃಂಭಿಸುತ್ತಾರೆ ಎಂಬ ಮಾತು ಜನಜನಿತವಾದುದು. ಪುರುಷರಿಗೆ ಸ್ತ್ರೀಯಿಂದ ಸಹಾಯ ಅನಿವಾರ್ಯ. ಹೆಣ್ಣು ತಾಯಿಗಾಗಿ, ಹೆಂಡತಿಗಾಗಿ, ಮಗಳಾಗಿ ಪುರುಷನ ಜೀವನಕ್ಕೆ ಆದರ್ಶಳು ಆಗಿದ್ದಾಳೆ. ಒಂದು ಕಾಲದಲ್ಲಿ ಭಾರತೀಯ ಮಹಿಳೆಗೆ ಶಿಕ್ಷಣ ಅಗತ್ಯವೆಂದು ನಂಬಿರಲಿಲ್ಲ. ಮಹಿಳೆಯರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಇರಲಿಲ್ಲ. ಹೆಣ್ಣು ಮಕ್ಕಳು ಶಾಲೆಗೆ ಸೇರುವುದು ವಿದ್ಯಾಭ್ಯಾಸ ಮಾಡುವುದೇ ತಪ್ಪು ಎಂಬ ಭಾವನೆ ಮತ್ತು ಕಲ್ಪನೆ ಸಮಾಜದಲ್ಲಿ ಬೇರೂರಿತ್ತು. ಸ್ತ್ರೀ ಉದ್ಯೋಗ, ವ್ಯಾಪಾರ ವಹಿವಾಟು ಮಾಡುವಂತಿರಲಿಲ್ಲ. ಬೌದ್ಧಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಶಕ್ತಳಾಗಿದ್ದರೂ ಯಾವುದೇ ಮುಕ್ತ ಸ್ವಾತಂತ್ರ್ಯವಿರಲಿಲ್ಲ. ಸ್ವಂತ ದುಡಿಮೆಯಿಂದ ಹಣ ಸಂಪಾದನೆ ಮಾಡುವ ಅವಕಾಶವಿರಲಿಲ್ಲ, ಸ್ತ್ರೀಯನ್ನು ಪೋಷಿಸುವ ಪುರುಷ ಆಕಸ್ಮಿಕ ಮರಣಕ್ಕೆ ತುತ್ತಾದರೆ ಆಕೆ ಬೇರೆ ಪುರುಷನ ಆಶ್ರಯದಲ್ಲಿರಬೇಕಾಗಿತ್ತು. ಚಿಕ್ಕ ವಯಸ್ಸಿಗೆ ಸಾಂಸಾರಿಕ ಬದುಕಿಗೆ ತಳ್ಳಿ ಅವಳ ಆಸೆ-ಭರವಸೆಗಳನ್ನು ಮಣ್ಣುಪಾಲು ಮಾಡುತ್ತಿದ್ದರು. ಆದರೆ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಬದಲಾವಣೆಯ ಯುಗ ಆರಂಭವಾಗುತ್ತದೆ. 20ನೇ ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಸಾಹಿತ್ಯ ರಚಿಸಿದ್ದಾರೆ. ಕತೆ, ಕವನ, ವಿಚಾರ, ಸಂಶೋಧನೆ, ಶಿಶು ಸಾಹಿತ್ಯ, ಜೀವನ ಚರಿತ್ರೆ, ಕಾದಂಬರಿ, ನಾಟಕ, ವಿಮರ್ಶೆ, ಕಾವ್ಯ, ಪ್ರಬಂಧ, ಗ್ರಂಥಸಂಪಾದನೆ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ನಡೆಸಿದ್ದಾರೆ.

ಸ್ತ್ರೀಗೆ ಹೃದಯದ ಆಂತರಿಕ ಭಾವನೆ ತುಮುಲಗಳು ದುಃಖ-ದುಮ್ಮಾನಗಳನ್ನು ಅರ್ಥೈಸಿಕೊಂಡು ಪರಿಣಾಮಕಾರಿಯಾಗಿ ಹೊರಹಾಕಲು ಆಕೆಗೆ ಮಾತ್ರ ಸಾಧ್ಯವಾಗುತ್ತದೆ.

ಆದ್ದರಿಂದ ಸ್ತ್ರೀ ಸಂವೇದನೆ ಎನ್ನುವುದು ಸ್ವತಃ ಅನುಭವದಿಂದ ಬರಬೇಕು. ಈ ಹಿನ್ನೆಲೆಯಲ್ಲಿ ಪ್ರೊ.ಕಮಲಾ ಹಂಪನಾ ಅವರ ಸಾಹಿತ್ಯ ಕೃಷಿಯ ವಿಸ್ತಾರ ಅಗಣ್ಯವಾದುದು.

ಸ್ತ್ರೀವಾದಿ ಬೆಳವಣಿಗೆ ಮತ್ತು ಪ್ರೊ.ಕಮಲಾ ಹಂಪನಾ: ಪಂಪಪೂರ್ವ ಕಾಲ, ಹಳಗನ್ನಡ ಕಾಲ, ನಡುಗನ್ನಡ ಕಾಲ ಆಧುನಿಕ ಸಾಹಿತ್ಯ ಪ್ರಕಾರಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಮತ್ತು ಮಹಿಳಾ ಸಾಹಿತ್ಯ ಈ ಎಲ್ಲಾ ಪ್ರಕಾರ ಬಗ್ಗೆ ಇವರಿಗೆ ಅನುಭವವಿದೆ. ನಾಡೋಜ ಪ್ರೊ.ಕಮಲಾ ಹಂಪನಾ ಅವರು ವಿಚಾರ, ವಿಮರ್ಶೆ ಮತ್ತು ಸಂಶೋಧನೆ ಈ ಪ್ರಮುಖ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ಮಾಡಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅದ್ವಿತೀಯವಾದುದು. ಇವರ ಕಥೆಗಳು ಮತ್ತು ಪ್ರಬಂಧಗಳು ಬೇರೆ ಭಾಷೆಗಳಿಗೆ (ಬಂಗಾಳಿ, ತಮಿಳು) ಅನುವಾದಗೊಂಡಿದೆ. ಪ್ರೊ.ಕಮಲಾ ಹಂಪನಾರವರು ಸೃಜನಾತ್ಮಕವಾದ ಕೃತಿಗಳನ್ನು ನೀಡಿದ್ದಾರೆ. ಅವರ ಸಮಗ್ರ ಕೃತಿಗಳು 8 ಸಂಪುಟಗಳಲ್ಲಿ ಪ್ರತಿಷ್ಠಿತ ಸ್ವಪ್ನ ಬುಕ್‌ಹೌಸ್ ಪ್ರಕಟಿಸಿದೆ.

ಸ್ತ್ರೀವಾದ ಎನ್ನುವುದು ಪಾಶ್ಚಿಮಾತ್ಯರ 'ಫೆಮಿನಿಸಿಮ್' ಪದಕ್ಕೆ ಪರ್ಯಾಯವಾಗಿ ಕಂಡುಕೊಂಡ ಪದ. ಸ್ತ್ರೀವಾದ ಪುರುಷ ದ್ವೇಷಿಯಲ್ಲ ಅದು ಸ್ತ್ರೀಶೋಷಣೆಯ ವಿರುದ್ಧದ ಹೋರಾಟವಾಗಿದೆ. ಭಾರತೀಯ ಪರಂಪರೆ ಮತ್ತು ಇತಿಹಾಸದಲ್ಲಿ ಹೆಣ್ಣಿನ ಅತಿಯಾದ ವರ್ಣನೆ, ವೈಭವೀಕರಣ ಚಿರಪರಿಚಿತವಾದುದು. ಕಮಲಾ ಹಂಪನಾ ಅವರ ಹಲವಾರು ಲೇಖನಗಳು ಸ್ತ್ರೀ ಸಂವೇದನೆಗೆ ಸಂಬಂಧಿಸಿದ್ದಾಗಿದೆ. ಐದಾರು ದಶಕಗಳಿಂದ ನಿರಂತರವಾಗಿ ಬರಹದಲ್ಲಿ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡವರು. ಇವರ ಬರವಣಿಗೆಯಲ್ಲಿ ಸೃಜನಶೀಲತೆಯಿಂದ ಕೂಡಿದ ವಿಕಾಸಶೀಲ ಜೀವಂತಿಕೆ ಇದೆ. ಅನುಭವ ಲೋಕವನ್ನು ಕಟ್ಟಿಕೊಡುವ ಅವರ ಸ್ತ್ರೀಪರ ಚಿಂತನೆ ಮೆಚ್ಚುವಂತದ್ದು. ಸ್ತ್ರೀಪರವಾದ ಚಿಂತನ ಬರಹಗಳನ್ನು ಪ್ರಮುಖವಾಗಿ ನೋಡಬಹುದು. ಪ್ರಾಚೀನಕಾಲದ ಶಾಸನಗಳಲ್ಲಿ ಬರುವ ಕಾವ್ಯಗಳಲ್ಲಿ ಬರುವ ಹಲವಾರು ಮಹಿಳೆಯರ ವಿಚಾರಗಳು ಅವರ ಬರವಣಿಗೆಯಲ್ಲಿ ಕಾಣಬಹುದು. ಅತ್ತಿಮಬ್ಬೆ, ಗಂಗಾದೇವಿ, ಅಬ್ಬಕ್ಕ, ಅಕ್ಕಮಹಾದೇವಿ, ಲೋಕಮಹಾದೇವಿ, ಅಚ್ಚಯಕ್ಕಾ, ಶಾಂತಲೆ, ಜಕ್ಕಲಮ್ಮ, ಬೆಳವಡಿ ಮಲ್ಲಮ್ಮ ಮುಂತಾದವರ ಬಗ್ಗೆ ತಲಸ್ಪರ್ಶಿ ಅಧ್ಯಯನ ಮಾಡಿ ವಿವರಿಸಿದ್ದಾರೆ. ಜನಪದ ಮಹಿಳೆಯರ ಅವರ ಸಾಧನೆಗಳು ನಮ್ಮ ಸಂಸ್ಕೃತಿಗೆ ಅವರ ಕೊಡುಗೆಗಳು, ಜನಪದ ಸಾಹಿತ್ಯ ಸಮೃದ್ಧವಾಗಿ ಬೆಳೆಯಲು ಕಾರಣರಾದವರು ಮಹಿಳೆಯರು ಎಂಬುದನ್ನು ಇಲ್ಲಿ ಮನಗಾಣಬಹುದಾಗಿದೆ. ಸ್ತ್ರೀ ಸಂವೇದನೆಯ ಬರಹಗಳನ್ನು ಕಮಲಾ ಹಂಪನಾ ಅರವತ್ತರ ದಶಕದಿಂದಲೇ ಬರೆದವರು. ಸ್ತ್ರೀ ಸಂವೇದನೆಗೆ ಸಂಬಂಧಿಸಿದ ಲೇಖನಗಳನ್ನೇ ಒಂದೆಡೆ ತಂದು ಅದಕ್ಕೆ 'ಭರಣ' ಎಂದು ಹೆಸರು ಕೊಟ್ಟಿದ್ದಾರೆ.

'ಅಮೃತಮತಿ ಸ್ತ್ರೀವಾದಿ ನೆಲೆಯಲ್ಲಿ' ಎಂಬ ಈ ಲೇಖನದಲ್ಲಿ ಅಮೃತಮತಿಯ ವಿಚಾರಗಳನ್ನು ತುಂಬಾ ವಿಸ್ತೃತವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಕನ್ನಡದ ಶ್ರೇಷ್ಠ ಕವಿ ಜನ್ನ ಯಶೋಧರಚರಿತೆಯಲ್ಲಿ ಅಮೃತಮತಿಯ ಪಾತ್ರ ಚಿತ್ರಣವನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶೇಷವಾಗಿ ತಿಳಿಸಿದ್ದಾರೆ. ರಾಜನ ಪಟ್ಟದ ರಾಣಿಯಾಗಿ ಅಮೃತಮತಿಯನ್ನು ನೋಡದೆ ಒಬ್ಬ ಸಾಮಾನ್ಯ ಹೆಣ್ಣಾಗಿ ನೋಡಿದರೆ ಸ್ತ್ರೀಯ ತಲ್ಲಣ ತವಕಗಳನ್ನು ವಿವರಣಾತ್ಮಕವಾಗಿ ಚಿತ್ರಿಸಿದ್ದಾರೆ. ಜನ್ನ ಈ ಕಾವ್ಯದಲ್ಲಿ ಅಮೃತಮತಿ ವಿಧಿಯ ಕೈಗೊಂಬೆಯಾಗಿ ಯಶೋಧರನಂತ ಮಹಾರಾಜನನ್ನು ಬಿಟ್ಟು ಅಷ್ಟಾವಕ್ರನಾದ ಒಬ್ಬ ಮಾವುತನೊಡನೆ ದೈಹಿಕ ಸಂಬಂಧಕ್ಕೆ ಅಪೇಕ್ಷಿಸಿದಳು, ಇದು ಸರಿಯೇ ಎಂಬ ಪ್ರಶ್ನೆ ಸಹೃದಯವನ್ನು ಕಾಡುತ್ತದೆ. ಜನ್ನ ಕವಿ ಅಮೃತಮತಿಯ ಮನಃಸ್ಥಿತಿಗೆ ಕಾರಣವೇನು? ಎಂಬುದನ್ನು ಹೇಳುವುದಿಲ್ಲ, ಆದರೆ ಸಂಸ್ಕೃತ

ಯಶೋಧರಚರಿತೆಯಲ್ಲಿ ವಾದಿರಾಜ ವಿರಚಿತ ಕಾವ್ಯದಲ್ಲಿ ಯಶೋಧರ ರಾಣಿಯನ್ನು ಲೈಂಗಿಕವಾಗಿ ತೃಪ್ತಿಪಡಿಸಲು ಅಸಮರ್ಥನಾಗಿದ್ದ ಎಂಬ ಕುರುಹು ನಮಗೆ ಲಭಿಸುತ್ತದೆ. ಆದರೆ ಜನ್ನನಲ್ಲಿ ದೊರೆಯುವುದಿಲ್ಲ, ಅಷ್ಟಾವಕ್ರನ ಗಾನಕ್ಕೆ ಮನಸೋತು ಅವನನ್ನು ಅಪೇಕ್ಷಿಸಿದಳು ಎಂಬುದು ಸಾಮಾನ್ಯವಾಗಿ ಚಿಂತನೆಗೆ ಎಡೆ ಮಾಡಿಕೊಡುತ್ತದೆ. ಇನ್ನು ಕೆಲವು ಅಂತರಂಗಿಕವಾಗಿ ಒಳಹೊಕ್ಕು ಕವಿ ಕೆಲವು ಸೂಕ್ಷ್ಮಗಳನ್ನು ವಿವರಿಸಬಹುದಿತ್ತೇನೋ ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ. ಅಮೃತಮತಿಯ ಒಳಮನಸ್ಸಿನಲ್ಲಿದ್ದ ಭಾವನೆಗಳೇನು? ಏಕೆ ಆ ನಿರ್ಧಾರಕ್ಕೆ ಬಂದಳು? ಅಂತಹ ನಿರ್ಧಾರಕ್ಕೆ ಕಾರಣವೇನು? ಎಂಬುದನ್ನು ತಿಳಿಸಬೇಕಿತ್ತು ಎಂಬುದು ಎಲ್ಲರು ಒಪ್ಪತಕ್ಕದ್ದು. ಕಮಲಾ ಹಂಪನಾ ಅವರೇ ಹೇಳುವಂತೆ ಅಮೃತಮತಿಯದು ಆದರ್ಶಪಾತ್ರವಲ್ಲ, ಅದು ಪ್ರತಿಕೂಲ ಪರಿಸರವನ್ನು ಎದುರಿಸುವ ಒಬ್ಬ ದಿಟ್ಟ ಹೆಣ್ಣಿನ ಹೋರಾಟದ ಪಾತ್ರ. ಇಂಥ ನಿರ್ದಿಷ್ಟ ಸ್ತ್ರೀವಾದಿ ನಿಲುವಿನಿಂದ ಅಮೃತಮತಿಯ ನಡವಳಿಕೆಯನ್ನು ವಿವರಿಸುವ ಪ್ರಯತ್ನ ನಡೆಯಬೇಕಿದೆ ಎಂದು ಹೇಳಿದ್ದಾರೆ.

1975 (1925 ಅಲ್ಲ) ರಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ವರ್ಷದ ಆಚರಣೆಯಿಂದ ಸ್ತ್ರೀಯರಿಗೆ ಹೆಚ್ಚಿನ ಸವಲತ್ತುಗಳು ದೊರೆಯದಿದ್ದರೂ ಒಂದು ಸಾಮೂಹಿಕ ಜಾಗೃತಿ ಮೂಡಿಸುವಲ್ಲಿ ಹೆಚ್ಚು ಪ್ರಯೋಜನಕಾರಿಯಾಯಿತು. ಎಲ್ಲಾ ವರ್ಗದ ಸ್ತ್ರೀಯರಿಗೂ ಪ್ರಾತಿನಿಧ್ಯ ದೊರಕುವಂತಾಗಲು "ಅಖಿಲ ಕರ್ನಾಟಕ ಉದ್ಯೋಗಸ್ಥ ಮಹಿಳೆಯರ ಒಕ್ಕೂಟ" ಸ್ಥಾಪನೆ ಆಗಬೇಕೆಂಬುದು ಅವರ ಒತ್ತಾಸೆಯಾಗಿದೆ. ಪ್ರತಿಯೊಬ್ಬ ಮಹಿಳೆಗೂ ಹಲವಾರು ಸಮಸ್ಯೆಗಳಿರುತ್ತವೆ. ಈ ಸಮಸ್ಯೆಗಳನ್ನು ಬಗೆ ಹರಿಸುವ ಕಡೆ ಹೆಚ್ಚು ಕಾಳಜಿ ವಹಿಸಬೇಕಾಗಿದೆ. ಇದಕ್ಕೆ ಪೂರಕವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

- ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ
- ಸ್ತ್ರೀಯರಿಗೆ ಪ್ರತ್ಯೇಕ ಉದ್ಯೋಗ ವಿನಿಮಯ ಕೇಂದ್ರ
- ಮಹಿಳೆಯರಿಗಾಗಿಯೇ ಶೇಕಡಾವಾರು ಹುದ್ದೆಗಳನ್ನು ಮೀಸಲಿಡುವುದು.
- ಕೆಲವು ಹುದ್ದೆಗಳನ್ನು ಸ್ತ್ರೀಯರಿಗಾಗಿ ಸೃಷ್ಟಿಸಿ ಅವರಿಗೆ ನಿಗದಿಪಡಿಸುವುದು.
- ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳನ್ನು ಹೆಚ್ಚು ಹೆಚ್ಚು ತೆರೆಯುವುದು.
- ಹೆಣ್ಣುಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಎಲ್ಲಾ ಇಲಾಖೆಗಳಲ್ಲಿಯೂ ಒಂದು ವಿಭಾಗವನ್ನು ಆರಂಭಿಸುವುದು.
- ಮಕ್ಕಳನ್ನು ನೋಡಿಕೊಳ್ಳುವ ಮಕ್ಕಳ ರಕ್ಷಣಾ ಕೇಂದ್ರವನ್ನು ಅಗತ್ಯವಿದ್ದ ಕಡೆ ತೆರೆಯುವುದು.

ತಾಂತ್ರಿಕ ಶಿಕ್ಷಣದಲ್ಲಿ ಬುದ್ಧಿವಂತರಾದ ಮಹಿಳೆಯರನ್ನು ಇನ್ನು ಹೆಚ್ಚಿನ ವ್ಯಾಸಂಗಕ್ಕೆ ಪ್ರೋತ್ಸಾಹಿಸುವುದು. ಹೆಚ್ಚಿನ ತರಬೇತಿಗೆ ಅವಶ್ಯಕವಾದರೆ ಪರದೇಶಗಳಿಗೆ ಕಳುಹಿಸುವುದು ಒಳ್ಳೆಯದು ಎಂಬ ಕಮಲಾ ಹಂಪನಾರವರ ಸ್ತ್ರೀಪರವಾದ ಪರಿಕಲ್ಪನೆ ಸ್ವಾಗತಾರ್ಹ. ತಮ್ಮ ಸಲಹೆ ಮತ್ತು ವಿಚಾರಗಳನ್ನು ಮುಕ್ತವಾಗಿ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಎಷ್ಟೇ ಅಭಿವೃದ್ಧಿ ಹೊಂದಿದ ದೇಶವಾದರೂ ಸ್ತ್ರೀ ಶೋಷಣೆ ಅವಿರತವಾಗಿ ಇದ್ದೇ ಇದೆ. ಅದೇ ರೀತಿಯಲ್ಲಿ ಉದ್ಯೋಗಸ್ಥ ಮಹಿಳೆಯರ ಬಗ್ಗೆ ಬೌದ್ಧಿಕ ಹಾಗೂ ದೈಹಿಕ ಶ್ರಮ ಎಂದು ವಿಭಜನೆ ಮಾಡಬೇಕು ಎಂದು ತಿಳಿಸಿದ್ದಾರೆ. ಭಾರತ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ.

ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಆಧುನಿಕವಾಗಿ ಮುಂದುವರಿಯುತ್ತಿದೆ, ಆದರೆ ಎಷ್ಟೇ ಮುಂದುವರೆದರೂ ಹೆಣ್ಣಿನ ಮೇಲಿನ ಕ್ರೌರ್ಯ, ದೌರ್ಜನ್ಯಗಳು ಕ್ಷಮಿಸಲಾರದಷ್ಟು ಹೆಚ್ಚುತ್ತಿವೆ. ಹೆಣ್ಣು ಭ್ರೂಣಹತ್ಯೆಗೆ ಬಲವಾದ ಕಾನೂನು ರೂಪಿಸಬೇಕು ಎಂಬ ಅವರ ಕಾಳಜಿ ವಿಶೇಷವಾದುದು. ಸ್ತ್ರೀಯನ್ನು ಎಲ್ಲಾ ರೀತಿಯಲ್ಲು ಉಪಯೋಗಿಸಿಕೊಂಡು ಅವಳನ್ನು ವಿಚಿತ್ರವಾಗಿ ಸಾವಿನ ದವಡೆಗೆ ತಳ್ಳುವ ವಿಚಿತ್ರವನ್ನು ಕಂಡು ಒಂದು ಕಡೆ ಹೀಗೆ ಹೇಳುತ್ತಾರೆ.

**“ಅಕ್ಷತೆ ಸುರಿದ ಕೈಯಲ್ಲೇ**
**ಸೀಮೆ ಎಣ್ಣೆ ಸುರಿವರಯ್ಯ**
**ಅರಿಶಿನ ಹಚ್ಚಿದ ಕೈಯಲ್ಲೇ**
**ಬೆಂಕಿ ಹಚ್ಚಿ ಸುಡುವರಯ್ಯ**
**ವಧು ಮಾಡಿ ಮನೆ ತುಂಬಿಸಿಕೊಂಡವರೇ**
**ಹೆಣ ಮಾಡಿ ಆಚೆ ಸಾಗಿಸುವರಯ್ಯ ಕಮಲಾ ಪ್ರಿಯ”**

ಏನೂ ಅರಿಯದ ಮುಗ್ಧ ಹೆಣ್ಣು ಮಗಳನ್ನು ಸಾಂಪ್ರದಾಯಿಕವಾಗಿ ವಧು ಮಾಡಿ ಮನೆಗೆ ಸೊಸೆಯಾಗಿ ಸ್ವೀಕರಿಸಿದವರೇ ವಿಚಿತ್ರವಾಗಿ ಕೊಂದು, ಧನ ಪಿಶಾಚಿಗಳ ಕ್ರೌರ್ಯಕ್ಕೆ ತುತ್ತಾಗಿ ನಲುಗಿ ಸತ್ತ ಜೀವಗಳ ಕಂಡು ಮರುಗಿರುವ ಲೇಖಕಿ ಹೃದಯಕ್ಕೆ ತಟ್ಟುವಂತೆ ತಮ್ಮ ಸರಳವಾದ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸಂಪ್ರದಾಯ ಬದ್ಧವಾದ ತಾಳಿ ಎನ್ನುವುದು ಹೆಣ್ಣಿನ ಕುತ್ತಿಗೆಗೆ ಬಂಧನವಾಗಿ ಬಿಡುತ್ತದೆ. ಸ್ವಾತಂತ್ರ್ಯವಿಲ್ಲದ ಆತಂತ್ರ ಸ್ಥಿತಿಯಲ್ಲಿ ಬದುಕಬೇಕಾಗುತ್ತದೆ. ಡಾ.ಜಿ.ಆರ್.ತಿಪ್ಪೇಸ್ವಾಮಿಯರು ಹೇಳುವಂತೆ ಹೆಣ್ಣಿಗೆ ಗಂಡನೊಂದು ಶೂಲ? ಮಗಳೊಂದು ದ್ವಿಶೂಲ? ಮಗನೊಂದು ತ್ರಿಶೂಲ? ಬಂಧುಗಳು ಬಹುಶೂಲಗಳು ಇವರ ಸೇವೆ ಸಾಂತ್ವನ ಸಂಧಾನ ಕಾರ್ಯಗಳಲ್ಲು ಸದಾ ನಿರತಳಾಗಬೇಕಾಗುತ್ತದೆ. ಮತ್ತೆ ಕೆಲವರು ತಮ್ಮ ಕೌಟುಂಬಿಕ ವಾತಾವರಣದಲ್ಲಿ ಬೆಳೆದ ಹೆಣ್ಣು ಮಕ್ಕಳ ಬಗ್ಗೆ ಅಪಾರವಾದ ಪ್ರೀತಿ ಗೌರವ ಇಟ್ಟುಕೊಂಡಿರುತ್ತಾರೆ, ಆದರೆ ಮುಖ್ಯವಾಗಿ ಬೇಕಾದ ಸ್ವಾತಂತ್ರ್ಯವಿರುವುದಿಲ್ಲ. ಈ ರೀತಿಯ ಜನರ ಬಗ್ಗೆ ಲೇಖಕಿ ಸಿಡಿದೇಳುತ್ತಾರೆ.

**“ನನ್ನನೇಕೆ ಬಂಧಿಸುವೆಯಯ್ಯ**
**ಕತ್ತಲೆಯ ಗರ್ಭಗುಡಿಯಲಿ**
**ನನ್ನನೇಕೆ ಪೂಜಿಸುವೆಯಯ್ಯ**
**ದೇವತೆಯ ಮಾಡಿ ಸ್ತುತಿಯಲಿ**
**ಬಿಡು ನನ್ನ ಹೊರಗೆ**
**ಮೆರವಣಿಗೆಯ ದೇವತೆಯಾಗಿ**
**ಬೀದಿ ಬೀದಿಯಲಿ ಚಲಿಸಿ ಬರುವೆ**
**ನಲಿದಾಡಿ ಬರುವೆ ಮೆರೆದಾಡಿ ಬರುವೆ**
**ಬಸವಿಯಾಗಲ್ಲ ಜಂಗಮ ದೇವತೆಯಾಗಿ**
**ಬಿಡು ನನ್ನ ಹೊರಗೆ ಮಡಿದು ಬರುವೆ**
**ಮಾನವಳಾಗಿ ಮಿಡಿದು ಬರುವೆ ಕಮಲಾ ಪ್ರಿಯ”**

ಪುರುಷನ ಹಂಗು, ರಕ್ಷಣೆ ಇಲ್ಲದೆ ನಾನು ಬದುಕಬಲ್ಲೆ ಎಂಬ ಶಕ್ತಿಯನ್ನು ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬುವ ರೀತಿ ತುಂಬಾ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ಎಲ್ಲಾ ರಂಗಗಳಲ್ಲೂ ಮುಕ್ತ ಪ್ರವೇಶ ಪಡೆಯುವ, ಸ್ವಾತಂತ್ರ್ಯದಿಂದ ಬದುಕುವ ಅವಕಾಶ ಸ್ತ್ರೀಗೆ ಬೇಕಾಗಿದೆ. ಹೆಣ್ಣಿನ ಸ್ಥಾನಮಾನಗಳು ಹೆಚ್ಚಲೂ ಎಲ್ಲರೂ ತಾತ್ವಿಕವಾಗಿ ಒಪ್ಪಿದರೂ, ಪುರುಷನ ಸ್ವಾರ್ಥ ಅಡ್ಡಿಯಾಗಿದೆ ಎಂಬುದೇ ಲೇಖಕಿಯ ಚಿಂತನೆಯಾಗಿದೆ. ಇನ್ನು

ಕಥಾಸಾಹಿತ್ಯದ ಕೆಲವೂ ಸ್ತ್ರೀ ಪರಧೋರಣೆ ಚಿಂತನೆಗಳನ್ನು ಉಲ್ಲೇಖಿಸುವುದಾದರೆ ಇವರ ಕತೆಗಳು ಎಲ್ಲಿಯೂ ಸಂಕೀರ್ಣತೆಗೆ ದಾರಿ ಮಾಡಿಕೊಡುವುದಿಲ್ಲ, ಹೇಳುವುದನ್ನು ಸರಳವಾಗಿ ನೇರವಾಗಿ ತಿಳಿಸುವ ಪಾತ್ರ ಚಿತ್ರಣಗಳು ಕಂಡುಬರುತ್ತವೆ.

'ಯೌವ್ವನ ನುಡಿಯಿತು' ತಂದೆ ಮಗಳ ನಡುವೆ ನಡೆದ ಸಂವಾದ ವಿಶೇಷವಾಗಿದೆ. "ಮನುಷ್ಯನ ಜೀವನ ಪರಿಪೂರ್ಣತೆಯನ್ನು ಪಡೆಯಬೇಕಾದರೆ ಹೆಣ್ಣಾಗಲಿ ಮದುವೆಯಾಗಲೇ ಬೇಕು" ಎಂದು ಹೇಳಿದರೆ ಅದಕ್ಕೆ ಮಗಳಾದ ಸರಳ ಉತ್ತರ ಹೀಗಿದೆ. ಕೇವಲ ಗಂಡಿನ ಸ್ವಾರ್ಥ ದೃಷ್ಟಿ ತನ್ನ ದೈಹಿಕ ಸುಖಕ್ಕಾಗಿ ತನ್ನ ಸೇವೆಗಾಗಿ ಮದುವೆ ಎನ್ನುವ ಸಂಕೋಲೆಯನ್ನು ತೊಡಿಸಿದ್ದಾರೆ, ಅವನ ಗುಲಾಮಳಾಗಿ ಅವಳು ನಿರಂತರ ಬದುಕಬೇಕು ಅವಳು ಮನುಷ್ಯಳು ಅವಳಿಗೂ ಹೃದಯವಿದೆ ಎನ್ನುವುದನ್ನು ಮರೆತು ಬಿಡುತ್ತಾನೆ. 'ಊರಿಗೆ ಹೊರಟೆ ಹೋದರು' ಕತೆಯಲ್ಲಿನ ಪ್ರಭ ಅನ್ಯ ಜಾತಿಯ ಹುಡುಗನನ್ನು ವರಿಸುವುದು, ಇದರಲ್ಲಿ ಅಂತರ್ಜಾತಿ ವಿವಾಹದ ನಂತರ ನಡೆದ ದುರಂತವನ್ನು ವಿವರಿಸಿದ್ದಾರೆ. ವ್ಯಸನವಾಗಿ ಮಹಿಳೆಯರನ್ನು ಕಾಡಬೇಕಾದ ಅವಶ್ಯಕತೆ ಈ ಅಷ್ಟಾಗಿ ಉಳಿದಿಲ್ಲ, ಹಾಗಾಗಿ ಹೆಣ್ಣು ಮಕ್ಕಳು ಬದುಕಿನ ಇತರ ಅನುಭವ ಸಾಧ್ಯತೆಯ ಕಡೆಗೆ ಗಮನ ಹರಿಸುವ ಅಗತ್ಯವಿದೆ. ಪುರುಷ ಮತ್ತು ಮಹಿಳಾಸಾಹಿತ್ಯ ಎಂಬ ಸಮಾನಾಂತರ ಗೆರೆಗಳು ಅಳಿಸಿಹೋಗಿ ಒಟ್ಟಾರೆ ಸಾಹಿತ್ಯ ಬೆಳೆಯಬೇಕಿದೆ ಎಂದು ಚಂದ್ರಶೇಖರ ಪಾಟೀಲರ ಮಾತು ಪ್ರಸ್ತುತ ಸಮಂಜಸವೆನಿಸುತ್ತದೆ. ಪ್ರೊ.ಕಮಲಾ ಹಂಪನಾರವರ ಬರಹಗಳಲ್ಲಿ ಸ್ತ್ರೀವಾದಿ ನೆಲೆಯನ್ನು ಗುರುತಿಸುವುದಾದರೆ ಪುರುಷನನ್ನು ವಿರೋಧಿಸಿ ಬದುಕು ಕಟ್ಟಿಕೊಳ್ಳುವುದಲ್ಲ, ಪುರುಷನೊಡನೆ ಹೊಂದಾಣಿಕೆ ಮಾಡಿಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದರಲ್ಲಿ ಹೊರಳುತ್ತದೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದ ಸ್ತ್ರೀಪರವಾದ ಚಿಂತನೆಗಳನ್ನು ಅವರ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಸರ್ವರ ಒಳಿತನ್ನು ಬಯಸುವ ಇವರ ಹಲವು ಲೇಖನಗಳು ಚಿಂತನಾರ್ಹವಾಗಿವೆ. ಇವರ ಮಹಿಳಾಪರವಾದ ಲೇಖನಗಳ ವಿದ್ವತ್ಪೂರ್ಣತೆ, ಪ್ರೌಢತೆ ಮತ್ತು ಸ್ತ್ರೀಪರ ಕಾಳಜಿ ಬಹಳ ವಿಶಿಷ್ಟವೂ ವಿಶೇಷವೂ ಆಗಿದೆ.

ಸ್ತ್ರೀ ಸಂವೇದನೆ ಕುರಿತಾದ ಸುಮಾರು 650 ಪುಟಗಳ 'ಭರಣ' ಎಂಬ ಸಂಪುಟವು ಪ್ರೊ.ಕಮಲಾ ಹಂಪನಾ ಅವರ ಸ್ತ್ರೀವಾದಿ ವಿಚಾರಗಳಿಗೆ ಹಿಡಿದ ಕೈಗನ್ನಡಿ. 'ಭರಣ' ಪ್ರಬಂಧಗಳ ಗುಚ್ಛ, ಧರಿಸುವುದು, ಪೋಷಿಸುವುದು, ತುಂಬುವುದು ಎಂಬ ಅರ್ಥಗಳು ಭರಣ ಪದಕ್ಕಿದೆ. ಈ ಮೂರು ಅರ್ಥಗಳೂ ಪೂರಕವಾಗಿ ಧರಿಸುವ, ತುಂಬುವ ಮತ್ತು ಪೋಷಿಸುವ ಗುಣಗಳ ಪ್ರತೀಕವೇ ಮಹಿಳೆ ಎಂದು ತಿಳಿಸುತ್ತಾರೆ. ಧರಿಸುವುದರಿಂದಲೇ ಆಕೆ ಧಾರಣಿ, ಶಾಂತಿ, ಸಹನೆ, ಧಾರಣೆಯ ಪ್ರತಿರೂಪವೇ ಸ್ತ್ರೀ. ಹೀಗೆ ಮಹಿಳೆ ಭರಣವೂ ಹೌದು ಆಭರಣವೂ ಹೌದು ಎಂದು ವಿವರಿಸುತ್ತಾರೆ. ಹಂಪನಾ ಅವರ ಚಿಂತನೆಯಲ್ಲಿ 'ಸಂಸಾರ' ಬಿಂದು ಪ್ರಮುಖ ಘಟಕ. ಅದು ಸರಿಯಾದ ಅಸ್ತಿಭಾರದ ಮೇಲೆ ನಿಂತಾಗ ಮಾತ್ರ ಸಮಾಜ, ನಾಡು, ದೇಶ, ಜಗತ್ತು ಸರಿಯಾಗಿ ನಿಲ್ಲಬಲ್ಲದು. ಇಂದು ಜಗತ್ತು ನಿಂತಿದೆ ಮುನ್ನಡೆಯುತ್ತಿದೆ ಎಂದರೆ ಅದರ ಶ್ರೇಯಸ್ಸು ಅದನ್ನು ಹೊತ್ತು ನಿಂತಿರುವ ಹೆಣ್ಣಿಗೆ ಸಲ್ಲುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. 'ಆ ಮುಖ' ಎಂಬ ಅವರ 19 ಜನ ಸಾಹಿತಿಗಳ ಪತ್ನಿಯರ ಸಂದರ್ಶನ, ವ್ಯಕ್ತಿ ಚಿತ್ರಣಗಳ ಕೃತಿಯಲ್ಲೂ ಕಮಲಾ ಹಂಪನಾ ಅವರು ಕೇಳುವ ಹಲವು ಪ್ರಶ್ನೆಗಳು ಈ ನಂಬಿಕೆಗೆ ಪೂರಕವಾಗಿಯೇ ಇದೆ. ಮಹಿಳೆಯರ ಬಗ್ಗೆ ವೈಚಾರಿಕ ಬರಹಗಳು, ರಾಷ್ಟ್ರಕೂಟ, ಗಂಗರ ಕಾಲದಿಂದ ಮಹಿಳೆಯರ ಬಗೆಗೆ ಸಂಶೋಧನಾ ಲೇಖನಗಳು, ಲೇಖಕಿಯರ ವ್ಯಕ್ತಿ ಚಿತ್ರಗಳು, ಲೇಖಕಿಯರ ಕೃತಿಗಳಿಗೆ ಬರೆದ ಮುನ್ನುಡಿಗಳು–ಹೀಗೆ ಕಮಲಾ

ಹಂಪನಾ ಅವರ ಮಹಿಳಾ ಸಾಹಿತ್ಯ ವಿಸ್ತಾರವಾಗಿದೆ. ಸಂಘರ್ಷಕ್ಕಿಂತ ಸಾಮರಸ್ಯದ ಬಗೆಗೆ ಅವರ ಒಲವಿದೆ.

'ಅಮೃತಮತಿ: ಸ್ತ್ರೀವಾದಿ ನೆಲೆಯಲ್ಲಿ' ಎಂಬ ಬರಹ ಕಮಲಾ ಹಂಪನಾ ಅವರ ಮನೋಭೂಮಿಕೆಯನ್ನು ಅರಿಯಲು ಸೂಕ್ತ ಬರಹವಾಗಿದೆ. ಈ ಬರಹದಲ್ಲಿ ಅವರು ಇತರ ಹಲವರ ಪ್ರಮುಖ ಲೇಖನಗಳನ್ನೂ ಪರಿಗಣಿಸಿದ್ದಾರೆ. ನೀತಿ–ಅನೀತಿ, ಅಸ್ಮಿತೆ, ಸಂಘರ್ಷ ಹೀಗೆ ಸಾಗಿ ಬಂದ ಹಲವು ವಿಚಾರಗಳನ್ನು ಚರ್ಚಿಸುತ್ತಾ ಹಂಪನಾ ಅವರು ಅಮೃತಮತಿಯ ಒಳತುಳಿತನ್ನು ಕಾವ್ಯನ್ಯಾಯದಿಂದ ಅರಿಯಬೇಕು ಎನ್ನುತ್ತಾರೆ. ಅಮೃತಮತಿಯ ಪ್ರಯತ್ನ ತಾನೇ ಇಷ್ಟಪಟ್ಟು ಬಯಸಿ ಕೂಡಿದವನೊಂದಿಗೆ ಹೊಸ ದಾಂಪತ್ಯವೆಂಬಂತೆ ಬಾಳಲು ಮಾಡುವ ಪ್ರಯತ್ನ ಎಂಬುದನ್ನು ಅವರು ಚರ್ಚಿಸುತ್ತಾರೆ. ಕೊನೆಗೆ ಅವರು ಕೇಳುವ ಪ್ರಶ್ನೆ ಅಮೃತಮತಿಯ ಬದಲಾಗಿ ಯಶೋಧರನೇ ಹಾಗೇ ಮಾಡಿದ್ದರೆ ಏನಾಗುತ್ತಿತ್ತು? ಅಂದರೆ, ಅರಮನೆಯ ಊಳಿಗದವಳೊಬ್ಬಳನ್ನು, ಗಾಯಕಿ, ನರ್ತಕಿ, ಸೇವಕಿ ಅಥವಾ ಮತ್ತೊಬ್ಬಳನ್ನು ಆಕೆಗೆ ಮದುವೆಯಾಗಿ ಗಂಡನಿದ್ದೂ ಯಶೋಧರನೆ ಬಯಸಿ ದೈಹಿಕ ಸಂಬಂಧ ಮಾಡಿದ್ದರೆ ಯಾವ ಪ್ರತಿಕ್ರಿಯೆಗಳು ಉಂಟಾಗುತ್ತಿದ್ದವು? ಬಹುಶಃ ಆಗ ಸಾಮಾಜಿಕ ಘರ್ಷಣೆಗಳು ಬರುತ್ತಿರಲಿಲ್ಲ. ಅಮೃತಮತಿಯದು ಆದರ್ಶ ಪಾತ್ರವಲ್ಲ. ಅದು ಪ್ರತಿಕೂಲ ಪರಿಸರವನ್ನು ಎದುರಿಸುವ ಒಬ್ಬ ದಿಟ್ಟ ಹೆಣ್ಣಿನ ಹೋರಾಟದ ಪಾತ್ರ ಎಂಬುದು ಅವರ ವಿಚಾರ. ಡಾ. ಚಂದ್ರಶೇಖರ ಕಂಬಾರರು ಹೇಳಿರುವಂತೆ ಶೂದ್ರ ಹೆಣ್ಣುಮಕ್ಕಳ ಧ್ವನಿಯಾಗಿ, ಪ್ರತಿಭಟನಾಕಾರರಾಗಿ, ನ್ಯಾಯವಾಗಿ ಕಂಡದ್ದನ್ನು ಕಂಡ ಹಾಗೆಯೇ ಹೇಳಿಬಿಡುವವರು ಕಮಲಾ ಹಂಪನಾರವರು ಎಂದಿದ್ದಾರೆ.

**ಕೊನೆಯ ಮಾತು:**

ಕಮಲಾ ಹಂಪನಾರವರ ಬರಹಗಳಲ್ಲಿ ಸ್ತ್ರೀವಾದಿ ನೆಲೆಯನ್ನು ಗುರುತಿಸುವುದಾದರೆ ಪುರುಷನನ್ನು ವಿರೋಧಿಸಿ ಬದುಕು ಕಟ್ಟಿಕೊಳ್ಳುವುದಲ್ಲ, ಪುರುಷನೊಡನೆ ಹೊಂದಾಣಿಕೆ ಮಾಡಿಕೊಂಡು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದರಲ್ಲಿ ಹೊರಳುತ್ತದೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದ ಸ್ತ್ರೀಪರವಾದ ಚಿಂತನೆಗಳನ್ನು ಅವರ ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಸರ್ವರ ಒಳಿತನ್ನು ಬಯಸುವ ಇವರ ಹಲವು ಲೇಖನಗಳು ಚಿಂತನಾರ್ಹವಾಗಿವೆ. ಇವರ ಮಹಿಳಾ ಪರವಾದ ಲೇಖನಗಳ ವಿದ್ವತ್ಪೂರ್ಣತೆ, ಪ್ರೌಢತೆ ಮತ್ತು ಸ್ತ್ರೀಪರ ಕಾಳಜಿ ಬಹಳ ವಿಶಿಷ್ಟವೂ ವಿಶೇಷವೂ ಆಗಿದೆ. ಹೀಗೆ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುವಲ್ಲಿ ಹೋರಾಟದ ದಾರಿಯೊಂದೆ ಕಾಣುವಂತಾಗಿದೆ. ಹಂಪನಾರವರ ಬರವಣಿಗೆಯು ಸಮಾಜಮುಖಿ, ನೈತಿಕ ಬದುಕಿನ ಚಿತ್ರಣ ಹಾಗೂ ಶ್ರೇಯಸ್ಸಿನ ಒಳಸತ್ಯವನ್ನು ಕಂಡುಕೊಳ್ಳುವಲ್ಲಿನ ತುಡಿತಗಳನ್ನು ನಾವು ಅರ್ಥೈಸಿಕೊಳ್ಳಬೇಕಿದೆ.

**ಪರಾಮರ್ಶನ ಗ್ರಂಥಗಳು:**


1. ಕರ್ನಾಟಕ ಸಾಹಿತ್ಯ ಅಕಾಡೆಮಿ, (2006), ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ಪ್ರೇಮಾ ಸಿರ್ಸೆ, (2006), ಮಹಿಳೆ, ಸಮಾಜ ಮತ್ತು ಸವಾಲುಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್.
3. ಶಾಂತಾದೇವಿ ಮಾಳವಾಡ, (1990), ಸಾರ್ವಜನಿಕ ರಂಗದಲ್ಲಿ ಮಹಿಳೆ, ಧಾರವಾಡ: ಸಹ್ಯಾದ್ರಿ ಪ್ರಕಾಶನ.
4. ಪ್ರೀತಿ ಶುಭಚಂದ್ರ, (2002), ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಅನುಪಮಾ ಎಚ್. ಎಸ್, (2012), ಮಹಿಳಾ ಜಾಗೃತಿ ಮತ್ತು ರಾಜಕೀಯ ಪ್ರಜ್ಞೆ, ಗದಗ: ಲಡಾಯಿ ಪ್ರಕಾಶನ.
6. ಕಮಲಾ ಹಂಪನಾ, (2022), ಬೆಳಕು ಬಿತ್ತಿದವರು, ಬೆಂಗಳೂರು: ಸ್ವಪ್ನಾ ಬುಕ್ ಹೌಸ್.
7. ಕಮಲಾ ಹಂಪನಾ, (2023), ಬೆಡಗಿನ ಬೆರಗು, ಬೆಂಗಳೂರು: ಸ್ವಪ್ನಾ ಬುಕ್ ಹೌಸ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.